## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 673
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 12.07.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ತಾಲ್ಲೂಕು, ಕೊತ್ತತ್ತಿ ಹೋಬಳಿ, ಗುತ್ತಲು ಗ್ರಾಮ ಸರ್ವೆ ನಂಬರ್ 497/6 (ಪ್ರಸ್ತುತ 497/6ಎ2) ರಲ್ಲಿನ 0.38 ಗುಂಟೆ ಮತ್ತು 497/59 ರಲ್ಲಿನ 0.07 ಜಮೀನು ಮೈಸೂರು ಸಕ್ಕರೆ ಕಂಪನಿ ಕೆಲಸಗಾರರ ಸಂಘ ರಿ.ನಂ.39/41 ಇದರ ಅಧ್ಯಕ್ಷರ ಹೆಸರಿನಲ್ಲಿ ದಿನಾಂಕ:17.03.1960 ರಲ್ಲಿ ನೋಂದಣಿ ಸಂಖ್ಯೆ ಕ್ರಮವಾಗಿ 6833 ಮತ್ತು 6834ರಂತೆ ಕ್ರಯ ಆಗಿರುವುದು ನಿಜವೇ; | ಮಂಡ್ಯ ತಾಲ್ಲೂಕು, ಕೊತ್ತತ್ತಿ ಹೋಬಳಿ, ಗುತ್ತಲು ಗ್ರಾಮ ಸರ್ವೆ ನಂಬರ್ 497/6 (ಪ್ರಸ್ತುತ 497/6ಎ2) ರಲ್ಲಿನ 0.38 ಗುಂಟೆ ಜಮೀನು ರಿ.ನಂ:6833/59-60 ದಿನಾಂಕ: 17.03.1960 ರಂತೆ ಮೈಸೂರು ಸಕ್ಕರೆ ಕಂಪನಿ ಕೆಲಸಗಾರರ ಸಂಘದ ಅಧ್ಯಕ್ಷರ ಹೆಸರಿಗೆ ಕ್ರಯವಾಗಿರುತ್ತದೆ. |
| ಆ) | ಮೇಲ್ಕಂಡ ಸಂಘದ ನೋಂದಣಿಯು ದಿನಾಂಕ:02.12.1982ರಂದು ರದ್ದುಗೊಂಡಿದ್ದು, ಸದರಿ ಸಂಘವು ಅಂದಿನಿಂದಲೂ ಅಸ್ತಿತ್ವದಲ್ಲಿಲ್ಲವೆಂದು ಮೇಲ್ಕಂಡ ಸ್ವತ್ತುಗಳು ಮಂಡ್ಯ ನಗರಸಭೆ ವ್ಯಾಪ್ತಿಯೊಳಗೆ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿನ ಆಯಕಟ್ಟಿನ ಸ್ಥಳದಲ್ಲಿದ್ದು ಬೃಹತ್ ಮೊತ್ತದ ಬೆಲೆಬಾಳುವ ಮತ್ತು ಮಾಲೀಕತ್ವ ಇಲ್ಲದಂತಾಗಿರುತ್ತದೆಂದು ಅದೇ ಕಾರಣ "PRINCIPALS OF LAW OF ESHEAT* ನಿಯಮದ ಪ್ರಕಾರ ಬೇನಾಮಿ ಆಸ್ತಿಗಳು ಎಂದು ಪರಿಗಣಿಸಿ ಸರ್ಕಾರದ ಸುಪರ್ದಿಗೆ ಪಡೆದುಕೊಳ್ಳಬೇಕೆಂದು ಮಂಡ್ಯ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಎರಡು ವರ್ಷಗಳ ಹಿಂದೆಯೇ ಸಾರ್ವಜನಿಕರು ಸಂಬಂಧಿಸಿದ ದಾಖಲೆಗಳೊಂದಿಗೆ ಅಹವಾಲು ಸಲ್ಲಿಸಿರುವುದು ನಿಜವೇ; | ಹೌದು. |
| ಇ) | ಹಾಗಿದ್ದಲ್ಲಿ, ಸದರಿ ಅಹವಾಲು ಸಂಬಂಧ ಯಾವ ಕ್ರಮಗಳನ್ನು ಕೈಗೊಂಡಿದೆ: | ಉಪವಿಭಾಗಾಧಿಕಾರಿ, ಮಂಡ್ಯ ಇವರು ಈ ಹಿಂದೆ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿದ್ದ ವರದಿಯಲ್ಲಿ ಜಮೀನಿನ ವರ್ಗಾವಣೆ ಮತ್ತು ಹಕ್ಕಿನ ಬಗ್ಗೆ ಸ್ಪಷ್ಟತೆ ಇಲ್ಲದೇ ಇದ್ದುದರಿಂದ ಸಮರ್ಪಕ ವರದಿ ನೀಡುವಂತೆ ಜಿಲ್ಲಾಧಿಕಾರಿಯವರು ಉಪವಿಭಾಗಾಧಿಕಾರಿ ಯವರಿಗೆ ತಿಳಿಸಿರುತ್ತಾರೆ. |
| ಈ) | ಕ್ರಮ ಕೈಗೊಳ್ಳದಿದ್ದಲ್ಲಿ, ವಿಳಂಬಕ್ಕೆ ಕಾರಣರಾದ ಯಾವ ಅಧಿಕಾರಿಗಳ ವಿರುದ್ಧ ಯಾವ ಕಾಲಮಿತಿಯೊಳಗೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು: | ಪರಿಶೀಲನಾ ವರದಿ ಪಡೆದ ನಂತರ ಲೋಪ ಎಸಗಿದ್ದಲ್ಲಿ ಸಂಬಂಧಿಸಿದವರ ವಿರುದ್ಧ ಕೂಡಲೇ ನಿಯಮಾನುಸಾರ ಕ್ರಮ ಜರುಗಿಸಲಾಗುವುದು. |
| ಉ) | ಮೇಲ್ಕಂಡ ಸ್ವತ್ತುಗಳಿಗೆ ಸಂಬಂಧವೇ ಇಲ್ಲದಂತಹ ಯಾವುದಾದರೂ ಸಂಘ ಸಂಸ್ಥೆಯು ಖಾಸಗಿಯವರಿಗೆ ಅಕ್ರಮವಾಗಿ ಮಾರಾಟ ಮಾಡಲು ಮಾರಾಟದ ಒಪ್ಪಂದ ಮಾಡಿರುತ್ತಾರೆಂದು ಜಿಲ್ಲಾಡಳಿತದ ಗಮನಕ್ಕೆ ಬಂದಿರುತ್ತದೆಯೇ; | ಜಿಲ್ಲಾಡಳಿತದ ಗಮನಕ್ಕೆ ಬಂದಿರುತ್ತದೆ. |
| ಊ) | ಹಾಗಿದ್ದಲ್ಲಿ, ಸದರಿ ಸ್ವತ್ತುಗಳನ್ನು ಪರಭಾರೆ ಮಾಡದಂತೆ ರಕ್ಷಿಸಲಾಗುವುದೇ ಮತ್ತು ಮೇಲ್ಕಂಡ ಸ್ವತ್ತುಗಳನ್ನು ಯಾವ ಕಾಲಮಿತಿಯೊಳಗೆ ಸರ್ಕಾರದ ಸುಪರ್ದಿಗೆ ಪಡೆಯಲು ಕೈಗೊಳ್ಳಲಾಗುವುದು? | ನಿಯಮಾನುಸಾರ ಪರಿಶೀಲಿಸಿ ಸರ್ಕಾರದ ಸುಪರ್ದಿಗೆ ಪಡೆಯಲು ಕ್ರಮ ವಹಿಸಲಾಗುವುದು. |

**(ಕಡತ ಸಂಖ್ಯೆ: ಕಂಇ 30 ಎಲ್‌ಜಿಎಮ್ 2023)**

**ಕೃಷ್ಣ ಬೈರೇಗೌಡ**
**ಕಂದಾಯ ಸಚಿವರು**